**ಸಾಕ್ಷಿಗೆ ದಿನಾಂಕ 07-11-2025ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು**

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀಮತಿ ಎಂ.ವ್ಹಿ.ಎಲ್. ವಕೀಲರಿಂದ

ಪ್ರತಿವಾದಿಯ ಪರಿಚಯ ನನಗೆ ಇಲ್ಲ. ನನಗೆ ವಾದಿಯ ಪರಿಚಯ ಇದೆ, ಅವರು ನನ್ನ ಸ್ನೇಹಿತರಲ್ಲ, ಆದರೆ ಪರಿಚಯ ಮಾತ್ರ ಇದೆ. ಕಾಳಗಿ ಊರಿನಿಂದ ಹೆಬ್ಬಾಳ ಊರು ಸುಮಾರು 45 ಕಿ.ಮೀ. ದೂರದಲ್ಲಿದೆ. ನಾನು ಹೆಬ್ಬಾಳಗೆ ಈ ಮೊದಲು ಹೋಗಿರುತ್ತೇನೆ. ನಿಶಾನೆ ಪಿ-1 ಆಗುವ ಮೊದಲು ಮಾತುಕತೆ ಏನು ಆಗಿತ್ತು ಎಂದು ನನಗೆ ಮಾಹಿತಿ ಇಲ್ಲ, ಆದರೆ ನಿಶಾನೆ ಪಿ-1ನ್ನು ಸಹಿ ಮಾಡುವ ಸಮಯದಲ್ಲಿ ನಾನು ಅಲ್ಲಿ ಇದ್ದೆ ಎಂದು ನುಡಿಯುತ್ತಾರೆ. ನಿಶಾನೆ ಪಿ-1 ದಾಖಲೆಯಲ್ಲಿ ನಿಮ್ಮ ಹೆಸರನ್ನು ಯಾವ ಕಾರಣಕ್ಕಾಗಿ ಟೈಪ್ ಮಾಡಿಲ್ಲ ಎಂದು ಕೇಳಿದಾಗ, ಸಾಕ್ಷಿಯು ನಿಶಾನೆ ಪಿ-1ಕ್ಕೆ ಸಾಕ್ಷಿಯಾಗಿ ಬರಬೇಕಾದ ವ್ಯಕ್ತಿ ಬಂದಿಲ್ಲದಿದ್ದ ಕಾರಣ, ನನ್ನ ಹೆಸರನ್ನು ಕೈಯಿಂದ ಬರೆಯಲಾಗಿದೆ ಎಂದು ನುಡಿಯುತ್ತಾರೆ.

ಉಪನೊಂದಣಾಧಿಕಾರಿ ಕಛೇರಿಗೆ ನನ್ನನ್ನು ವಾದಿಯು ಕರೆದುಕೊಂಡು ಹೋಗಿದ್ದರು. 2015ನೇ ಇಸ್ವಿಯಲ್ಲಿ ಹೆಬ್ಬಾಳ ಗ್ರಾಮದಲ್ಲಿ 1 ಎಕರೆ ಜಮೀನಿನ ಬೆಲೆ ರೂ. 7 ರಿಂದ 8 ಲಕ್ಷ ಇತ್ತು ಎಂದರೆ ನನಗೆ ಗೊತ್ತಿಲ್ಲ. ನಾನು ಪಿಯುಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿ ನಮೂದು ಮಾಡಿದಂತೆ ವಾದಿ ಮತ್ತು ಪ್ರತಿವಾದಿಯ ನಡುವೆ ಯಾವುದೇ ಕರಾರು ಆಗಿಲ್ಲ ಮತ್ತು ಪ್ರತಿವಾದಿಯು ವಾದಿಗೆ 3 ಎಕರೆ ಜಮೀನನ್ನು ರೂ. 4,14,000/- ಗಳಿಗೆ ಮಾರಾಟ ಮಾಡಲು ಒಪ್ಪಿಕೊಂಡಿಲ್ಲ ಮತ್ತು ವಾದಿಯು ಎಂದಿಗೂ ರೂ. 4,00,000/- ಹಣವನ್ನು ಪ್ರತಿವಾದಿಗೆ ನೀಡಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿ ಅನಕ್ಷರಸ್ಥನಾಗಿದ್ದು, ಆತನಿಗೆ ನಿಶಾನೆ ಪಿ-1ರಲ್ಲಿ ಏನು ಬರೆಯಲಾಗಿದೆ ಎಂದು ಮಾಹಿತಿ ಇರಲಿಲ್ಲ ಎಂದರೆ ಸಾಕ್ಷಿ, ಪ್ರತಿವಾದಿಯ ಮಗ ಒಬ್ಬ ಸಾಕ್ಷನಾಗಿ ಸಹಿ ಮಾಡಿದ್ದು, ಆತನೇ ಪ್ರತಿವಾದಿಗೆ ನಿಶಾನೆ ಪಿ-1ರ ಮಾಹಿತಿಯನ್ನು ನೀಡಿದ್ದ ಎಂದು ನುಡಿಯುತ್ತಾರೆ. ಪ್ರತಿವಾದಿಯ ಮಗನಿಗೂ ಸಹ ಓದಲು ಬರೆಯಲು ಬರುವುದಿಲ್ಲ ಎಂದರೆ ಸರಿಯಲ್ಲ. ವಾದಿಯು ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ವಾದಿ ನನ್ನ ಸ್ನೇಹಿತನಾದ ಕಾರಣ, ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಚಿತ್ತಾಪೂರ.